ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ8[7]ಶಾಶಿಅ:ಹೆಚ್ಚುವರಿ.ಶಿ.ಮ:75:2009-10 ದಿನಾಂಕ:25ನೇ ಆಗಸ್ಟ್ 2011

**ಇವರಿಗೆ:**

**ಉಪ ನಿರ್ದೇಶಕರು,**

ಸಾರ್ವಜನಿಕ ಶಿಕ್ಷಣ ಇಲಾಖೆ,

____________________ಜಿಲ್ಲೆ.

**ಮಾನ್ಯರೇ,**

**ವಿಷಯ:** ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿಗದಿತ ಕಾರ್ಯಭಾರವಿಲ್ಲದ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸಿ ಕಾರ್ಯಭಾರವಿರುವ ಶಾಲೆಗಳ ಖಾಲಿ ಹುದ್ದೆಗಳಿಗೆ ಮರುಹಂಚಿಕೆ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಇಡಿ:69:ಎಸ್‌ಓಹೆಚ್:2011, ದಿ:31.03.2011.

2] ನಿಮ್ಮ ಕಛೇರಿ ಪತ್ರ ದಿನಾಂಕ:23.08.2011.

\>\>\>\>\>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿಗದಿತ ಕಾರ್ಯಭಾರವಿಲ್ಲದ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸಿ ಕಾರ್ಯಭಾರವಿರುವ ಶಾಲೆಗಳ ಖಾಲಿ ಹುದ್ದೆಗಳಿಗೆ ಮರುಹಂಚಿಕೆ ಮಾಡುವ ಬಗ್ಗೆ ಉಲ್ಲೇಖ [1]ರ ಸರ್ಕಾರದ ಆದೇಶದಂತೆ ನಿಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಹೆಚ್ಚುವರಿ ಶಿಕ್ಷಕರುಗಳನ್ನು ಜಿಲ್ಲಾ ಹಂತದಲ್ಲಿ ಮರುಹಂಚಿಕೆ ಮಾಡಿ, ಆಹಂತದಲ್ಲಿ ಶಿಕ್ಷಕರುಗಳ ವಿಷಯವಾರು ಹುದ್ದೆ ಖಾಲಿಇಲ್ಲದಿರುವುದರಿಂದ ನಿರ್ದೇಶಕರ ಹಂತದಲ್ಲಿ ಹೆಚ್ಚುವರಿ ಶಿಕ್ಷಕರುಗಳನ್ನು ಮರುಹಂಚಿಕೆ ಮಾಡಲು ಶಿಕ್ಷಕರುಗಳ ಪಟ್ಟಿಯನ್ನು ಉಲ್ಲೇಖ [2]ರಲ್ಲಿ ಈ ಕಛೇರಿಗೆ ಸಲ್ಲಿಸಿರುವುದನ್ನು ಪರಿಶೀಲಿಸಿ, ಆದ್ಯತಾ ಪಟ್ಟಿಯನ್ನು ತಯಾರಿಸಿ, ಈ ಪತ್ರಕ್ಕೆ ಲಗತ್ತಿಸಿದೆ.

- ನಿಮ್ಮ ವ್ಯಾಪ್ತಿಗೆ ಬರುವ ಶಿಕ್ಷಕರುಗಳಿಗೆ ಕೌನ್ಸಿಲಿಂಗ್‌ಗೆ ಹಾಜರಾಗಲು ನೋಟೀಸ್ ಸಿದ್ದಪಡಿಸಿ, ಮುದ್ದಾಂ ನೀಡಿ, ಸ್ವೀಕೃತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.
- ಸದರಿ ನೋಟೀಸನ್ನು ಕೌನ್ಸಿಲಿಂಗ್‌ಗೆ ಹಾಜರಾಗುವ ದಿನಾಂಕದಂದು ಸಂಬಂಧಿಸಿದ ಶಿಕ್ಷಕರುಗಳು ಹಾಜರುಪಡಿಸಬೇಕೆಂದು ತಿಳಿಸಲು ಸೂಚಿಸಿದೆ.
- ಕೌನ್ಸಿಲಿಂಗ್ ನಡೆಯುವ ದಿನಾಂಕದಂದು ಸಂಬಂಧಿಸಿದ ಜಿಲ್ಲಾ ವ್ಯಾಪ್ತಿಯ ಕಾರ್ಯನಿರ್ವಾಹಕರು ಈ ಕಛೇರಿಯಲ್ಲಿ ಹಾಜರಿರಲು ಸೂಚಿಸಿದೆ.
- ಶಿಕ್ಷಕರ ಆದ್ಯತಾ ಪಟ್ಟಿಯನ್ನು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಈ ಕಛೇರಿ ವೆಬ್ ಸೈಟ್‌ನಲ್ಲಿ ಅಳವಡಿಸಲಾಗಿದೆ. ಸದರಿ ಶಿಕ್ಷಕರುಗಳು ಅಧ್ಯಾಪಟ್ಟಿ ಮತ್ತು ಖಾಲಿ ಹುದ್ದೆಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಗಮನಿಸಿ, ಕೌನ್ಸಿಲಿಂಗ್ ಹಾಜರಾಗುವಂತೆ ಸೂಚಿಸುವುದು.

***[ವೆಬ್‌ಸೈಟ್ ವಿಳಾಸ: http://www.schooleducation.kar.nic.in]***

## ಕೌನ್ಸಿಲಿಂಗ್ ವೇಳಾಪಟ್ಟಿ

- ***ಕೌನ್ಸಿಲಿಂಗ್ ನಡೆಯುವ ದಿನಾಂಕ:30.08.2011***
- ***ಸಮಯ ಬೆಳಗ್ಗೆ 10.30 ರಿಂದ***
- ***ಸ್ಥಳ : ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560001.***

ಮಾನ್ಯ ಆಯುಕ್ತರ ಆದೇಶದ ಮೇರೆಗೆ,

ತಮ್ಮ ನಂಬುಗೆಯ,

ನಿರ್ದೇಶಕರು (ಪ್ರೌಢ ಶಿಕ್ಷಣ)

ಪೂರ್ಣಿಮ. \\3-server\typing3\E\EST2\812-2011.doc